**ದಿಃ06.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ದಾವಾ ಆಸ್ತಿಗಳಲ್ಲಿ ತಮಗೆ ಪಾಲುಬೇಕೆಂದು ವಾದಿಗಳು ನನ್ನ ತಂದೆಯ ವಿರುದ್ದ ದಾವೆ ಸಲ್ಲಿಸಿರುತ್ತಾರೆ. ನನ್ನ ತಂದೆ ಅಷ್ಟಾಗಿ ಓಡಾಡುವುದಿಲ್ಲ. ಅವರಿಗೆ ಕಿವಿ ಕೇಳುವುದಿಲ್ಲ. ಮೊದಲು ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು ಲಿಖಿತ ಹೇಳಿಕೆ ಸಹಿ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ ಮತ್ತು ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆ ಚೆನ್ನಾಗಿ ಓಡಾಡಿಕೊಂಡಿದ್ದು ಅವರಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಮತ್ತು ಕಣ್ಣು ಕಾಣಿಸುಕಿವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದು, ಸುಳ್ಳು ಜಿ.ಪಿ.ಎ. ಅನ್ನು ಹಾಜರು ಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ನಾವು 04 ಜನ ಮಕ್ಕಳು. ಆದರ್ಶ ಶಿವಾನಂದ ರವರು ನನ್ನ ಮಗನಾಗಿರುತ್ತಾನೆ. ದಾವಾ ಚಾಲ್ತಿಯಲ್ಲಿರುವಾ ಸರ್ವೇ ನಂ.205 ರಲ್ಲಿ 01 ಎಕರೆ ಜಮೀನನ್ನು ನನ್ನ ಮಗನಾದ ಆದರ್ಶ ಶಿವಾನಂದ ರವರ ಹೆಸರಿನಲ್ಲಿ ದಾನ ಪತ್ರದ ಮೂಲಕ ದಾಖಲಿಸಿದ್ದು ಸದರಿ ಆಸ್ತಿಯ ಸರ್ವೇ ನಂಬರ್ 205/1 ಎಂದು ವಿಂಗಡಣೆ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ದಾವೆ ಚಾಲ್ತಿಯಲ್ಲಿದ್ದಾಗ ದಾವಾ ಐಟಂ 02 ಆಸ್ತಿಯಲ್ಲಿ 01 ಎಕರೆ 39 ಗುಂಟೆಯನ್ನು ತನ್ನ ತಮ್ಮನ

ಮಗನಾದ ಮಲ್ಲಿಕಾರ್ಜುನ್ ಬೆಳವೆಂಕಿ ರವರು ಹೆಸರಿಗೆ ಬಕ್ಷಿಸು ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ದಾವೆ ಚಾಲ್ತಿಯಲ್ಲಿದ್ದಾಗ ನನ್ನ ಮಗನಾಗಿ ಶ್ರೀಧರ್ ಬೆಳವಂಕಿ ರವರು ಹೆಸರರಿಗೆ ಸರ್ವೇ ನಂ.205/3 ರಲ್ಲಿ 01 ಎಕರೆ ಬಕ್ಷಿಸು ಆಗಿರುತ್ತದೆ ಎಂದರೆ ಸರಿ. ದಾವಾ ದಾಖಲಾದ ನಂತರ ಸದರಿ ಆಸ್ತಿಗಳಲ್ಲಿ ವಾದಿಗಳಿಗೆ ಭಾಗ ಹೋಗುತ್ತದೆ ಎಂದು ಸರ್ವೇ ನಂ.205 ರಲ್ಲಿ ಕ್ಷೇತ್ರ ವಿಂಗಡಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಸರ್ವೇ ನಂ.205 ರಲ್ಲಿನ ವಿಂಗಡಣೆಯ ಮೇರೆಗೆ ಆಗಿದ ಎಂಆರ್ ಹೆಚ್ 25/2025-2026, ಎಂಆರ್ ಟಿ 54/2024-2025 ಮತ್ತು ಎಂ ಆರ್ ಟಿ 23/2025-2026 ವಾದಿಗಳ ಮೇಲೆ ಬಂಧನಾಕಾರಿ ಆಗಿಲ್ಲ ಎಂದರೆ ಸರಿಯಲ್ಲ. ಈ ಕಾರಣ ದಿಂದ ನಾನು ನನ್ನ ತಂದೆಯಿಂದ ಸುಳ್ಳು ಜಿ.ಪಿ.ಎ ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಂ.ಇ. ನಂ.3135 ರಲ್ಲಿನ ವರದಿ ಪ್ರಕಾರ ನನ್ನ ತಂದೆಯ ಸಹೋದರಿಯರ ಲಗ್ನವಾಗಿದ್ದು ಅವರು ಗಂಡನ ಮನೆಗೆ ಹೋಗಿದ್ದರಿಂದ ಅವರ ಹೆಸರು ಕಡಿಮೆ ಮಾಡಿ ನನ್ನ ತಂದೆ ಮತ್ತು ಮೃತವಾದಿ ಯ ಹೆಸರನ್ನು ದಾವಾ ಆಸ್ತಿಗೆ ದಾಖಲಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ವಾದಿಗಳು ಕುಲಕುಂಷವಾಗಿ ಪರಿಶೀಲಿಸಿ ನನ್ನ ತಂದೆ ಮತ್ತು ಮೃತ ವಾದಿ ಮಾತ್ರ ನನ್ನ ಅಜ್ಜನ ವಾರಸುದಾರರು ಎಂದು ದಾವೆ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಯರು ಸಲ್ಲಿಸಿದ ವಂಶಾವೃಕ್ಷ ಸರಿ ಇರುವುದಿಲ್ಲ ಎಂದು

ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ 01 ಎ ಮತ್ತು ಬಿ ರವರು ತನ್ನ ಗಂಡ ಹಾಗೂ ತಂದೆಯ ವಾರಸಾನಾತೆಯಿಂದ ಹಕ್ಕು ಉಳ್ಳವಾಗಿರುತ್ತಾರೆಂದರೆ ಸರಿಯಲ್ಲ.

ಮೃತ ವಾದಿ ನನ್ನ ಚಿಕ್ಕಪ್ಪ ನಾಗಿರುತ್ತಾರೆ. ಅವರು 2024 ನೇ ಸಾಲಿ ನಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ. ನನ್ನ ಚಿಕ್ಕಪ್ಪನಿಗೆ ಅಶೋಕ ಎಂಬ ಒಬ್ಬ ಮಗನಿದ್ದು ಆತ ದಾವಾ ಚಾಲ್ತಿಯಲ್ಲಿದ್ದಾಗ 2023-2024 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಸಾಮೂಹಿಕ ಕಬ್ಜಾದಲ್ಲಿ ಉಳಮಿ ಮಾಡಲು ಬಿಡದ ಕಾರಣ ಅಶೋಕರವರು ಮಾನಸಿಕವಾಗಿನೊಂದು ಮರಣ ಹೊಂದಿರುತ್ತಾರೆಂದರೆ ಸರಿಯಲ್ಲ. ವಾದಿಗಳಿಗೂ ಸಹ ಸಾಮೂಹಿಕ ಕಬ್ಜಾದಲ್ಲಿ ಉಳಮಿ ಮಾಡಲು ಬಿಡದಿದ್ದರಿಂದ ಅವರು ಕೂಲಿನಾಲಿ ಮಾಡಿ ಉಪಜೀವನ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಈಗ ದಾವಾ ಆಸ್ತಿಗಳಲ್ಲಿ ನಾವು ಉಳಮೆ ಮಾಡುತ್ತಿದ್ದೇವೆ.

ದಾವಾ ಐಟಂ 01 ಮತ್ತು 03 ಆಸ್ತಿಗಳು ಮಾತ್ರ ಪಿತ್ರಾಜಿ ತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ 01 ಮತ್ತು 03 ರ ಉತ್ಪನ್ನದಿಂದ ದಾವಾ ಐಟಂ 02 ನ್ನು ನನ್ನ ತಂದೆ ಮತ್ತು ಮೃತವಾದಿ ಖರೀದಿಸಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಮತ್ತು ಮೃತ ವಾದಿಯರ ನಡುವೆ ಯಾವುದೇ ಕಾನೂನುಬದ್ದ ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ಆದ್ದರಿಂದ ದಾವಾ

ಆಸ್ತಿಗಳು ನನ್ನ ತಂದೆ ಮತ್ತು ಮೃತವಾದಿಯ ಸಾಮೂಹಿಕ ಕಬ್ಜಾದಲ್ಲಿರುವ ಆಸ್ತಿಗಳು ಎಂದರೆ ಸರಿಯಲ್ಲಿ. ದಾವಾ ಐಟಂ 02 ಆಸ್ತಿಯನ್ನು ನಾನು ಮತ್ತು ನನ್ನ ಮಕ್ಕಳು ನನ್ನ ಸ್ವಂತ ದುಡಿಮೆಯಿಂದ ಖರೀದಿಸಿದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನತಂದೆಯ ಹೆಸರನಲ್ಲಿ ಖರೀದಿಸಲಾಗಿರುತ್ತದೆ. ದಾವಾ ಐಟಂ 02 ಆಸ್ತಿ ಯನ್ನು ನಾನು ಮತ್ತು ನನ್ನ ಮಕ್ಕಳು ಸರಕು ವಾಹನ ಸಾರಿಗೆವ್ಯವಹಾರದಿಂದ ದುಡಿದ ಹಣದಿಂದ ಖರೀದಿಸಿರುವುದಿಲ್ಲ, ನನ್ನ ತಂದೆ ಮತ್ತು ಮೃತ ವಾದಿ ತಮ್ಮ ಸ್ವಂತ ದುಡಿಮೆಯಿಂದ ಖರೀದಿಸಿದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮೃತ ವಾದಿಯು ಈ ಹಿಂದೆ ಒಂದು ದಾವೆಮಾಡಿದ್ದಾಗ ಮತ್ತು ಅದು ವಜಾ ಆಗಿದ್ದಾಗ ನಾನು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆಯೇ ಎಂದು ನನಗೆ ಗೊತ್ತಿಲ್ಲ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**